ಇ) ಶೇಕಡ 70ರಷ್ಟು ಯಶಸ್ವಿಯಾಗಿದೆ. ಶೇಕಡ 30ರಷ್ಟು ನಿಷ್ಕ್ರಿಯವಾಗಿರುವುದಕ್ಕೆ ಕಾರಣ (1) ಸಕಾಲಕ್ಕೆ ಮಳೆ ಬಾರದಿರುವುದು (2) ಸುತ್ತ ಮುತ್ತಲ ಗ್ರಾಮಸ್ಥರು ಜಾನುವಾರುಗಳನ್ನು ಮೇಯಿಸಲು ಬಿಟ್ಟು ಧಕ್ಕೆ ಮಾಡುವುದು.

ರಾಜ್ಯದ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಮತ್ತು ಸರ್ವೇಯರ್ ಹುದ್ದೆಗಳ ಸಂಖ್ಯೆ

386 - ಶ್ರೀ ಗುರುಪಾದಪ್ಪ ನಾಗ್ಮಾರ್‌ಪಲ್ಲಿ (ಜೀರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗಾರ ಹಾಗೂ ಸರ್ವೆಯರ್ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)?

ಆ) ಈ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇವೆ?

ಇ) ಈ ಹುದ್ದೆಗಳನ್ನು ಬಹಳ ಕಾಲದಿಂದ ಭರ್ತಿ ಮಾಡದೇ ಇರುವುದರಿಂದ ರೈತರಿಗೆ ಹಾಗೂ ಇತರ ಜನರಿಗೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಖಾಲಿ ಇರುವ ಗ್ರಾಮಲೆಕ್ಕಿಗರ ಹಾಗೂ ಸರ್ವೇಯರ್‌ಗಳ ಹುದ್ದೆಗಳನ್ನು ತುಂಬಲು ತಕ್ಷಣ ಕ್ರಮ ಕೈಗೊಳ್ಳುರುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಖಾಲಿ ಇರುವ ಗ್ರಾಮಲೆಕ್ಕಿಗರ ಮತ್ತು ಸರ್ವೆಯರ್‌ಗಳ ಹುದ್ದೆಗಳು ಈ ಕೆಳಕಂಡಂತಿದೆ:

1) ಗ್ರಾಮ ಲೆಕ್ಕಿಗರು	-	2,034
2) ಸರ್ವೇಯರ್‌ಗಳು	-	1,360

ಆ) 1) ಗ್ರಾಮಲೆಕ್ಕಿಗರು - 1984 ರಿಂದ

2) ಸರ್ವೇಯರ್‌ಗಳು - 1988 ರಿಂದ

ಇ) ಹೌದು.

ಈ) 1) ಭಾರತ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಕ್ರಮಗೊಂಡ ಹೆಚ್ಚುವರಿ ಅರ್ಹ ದಿನಗೂಲಿ ನೌಕರರನ್ನು ವರ್ಗಾವಣೆ ಮೂಲಕ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

2) ಸರ್ವೇಯರ್‌ಗಳ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ನಿಯಮಾನುಸಾರ ಮುಂಬಡ್ತಿಗೆ ಲಭ್ಯವಾಗುವ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ

ರಾಜ್ಯದ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹಾಗೂ ಸರ್ವೇಯರ್ ಜಿಲ್ಲಾವಾರು ವಿವರ

	ಜಿಲ್ಲೆಯ ಹೆಸರು	ಖಾಲಿ ಇರುವ ಲೆಕ್ಕಿಗರ ಹುದ್ದೆಗಳು	ಖಾಲಿ ಇರುವ ಸರ್ವೇಯರ್ ಹುದ್ದೆಗಳು
1)	ಬೆಂಗಳೂರು (ನ)	5	10
2)	ಬೆಂಗಳೂರು (ಗ್ರಾಮಾಂತರ)	82	-
3)	ಕೋಲಾರ	124	36
4)	ತುಮಕೂರು	173	8
5)	ಶಿವಮೊಗ್ಗ	18	4
6)	ಚಿತ್ರದುರ್ಗ	96	2
7)	ಮೈಸೂರು	125	50
8)	ಮಂಡ್ಯ	78	15
9)	ಹಾಸನ	137	13
10)	ದಕ್ಷಿಣ ಕನ್ನಡ	144	30
11)	ಕೊಡಗು	12	9
12)	ಚಿಕ್ಕಮಗಳೂರು	58	9
13)	ಗುಲ್ಬರ್ಗ	196	10
14)	ರಾಯಚೂರು	83	18
15)	ಬಳ್ಳಾರಿ	105	11
16)	ಬೆಳಗಾವಿ	133	50
17)	ಬಿಜಾಪುರ	49	12
18)	ಬೀದರ್	-	-
19)	ಧಾರವಾಡ	339	33
20)	ಉತ್ತರ ಕನ್ನಡ	77	40
	ಒಟ್ಟು	2,034	360

ದಿ 18-12-91ರ ಆದೇಶ
ಸಂಖ್ಯೆ ಆರ್‌ಡಿ 286
ಎಫ್.ಎಲ್.ಆರ್. 90 ರಲ್ಲಿ
ಮಂಜೂರಾದ ಸರ್ವೇಯರ್
ಹುದ್ದೆಗಳ ಸಂಖ್ಯೆ 1000
ಒಟ್ಟು 1360